

# ವೃಕ್ಷ ವಿಸ್ಮಯ!



ಪ್ರಕೃತಿ ಹಲವಾರು ವೈಶಿಷ್ಟ್ಯಗಳನ್ನು ತನ್ನಲ್ಲಿ ಬಚ್ಚಿಟ್ಟುಕೊಂಡಿರುವುದನ್ನು ಬಿಚ್ಚಿ ತೋರಿಸುವ ವೃಕ್ಷವೊಂದು ವಾಷಿಂಗ್ಟನ್‌ನಲ್ಲಿ ಇದೆ. ಇಲ್ಲಿನ ನ್ಯಾಷನಲ್ ಪಾರ್ಕ್‌ನಲ್ಲಿನ ಕಲಾಲೋಚ್ ತೀರದ ಬಳಿ ಕೋಡು ಬಂಡೆಯ ಮೇಲಿರುವ ವೃಕ್ಷವು ಬುಡದಲ್ಲಿ ಯಾವುದೇ ಆಧಾರವಿಲ್ಲದೆ ಹಾಗೆಯೇ ನಿಂತಿದೆ.

ದಶಕಗಳ ಹಿಂದೆಯೇ ನೆಲಕ್ಕೊರಗಿ ಸತ್ತು ಧರಾಶಾಯಿಯಾಗಬೇಕಿದ್ದ ಈ ಮರ ಜೀವನದೊಂದಿಗೆ ತೂಗುಯ್ಯಾಲೆಯಾಡುತ್ತಿದೆಯೇನೋ ಎಂಬಂತೆ ಭಾಸವಾಗುತ್ತದೆ. ಮರ ಬೆಳೆಯಲು ಬೇಕಾಗಿರುವ ಜೀವನಾವಶ್ಯಕವನ್ನೆಲ್ಲವನ್ನು ಭೂಸವಕಳಿಯು ತನ್ನೊಂದಿಗೆ ಹೊತ್ತೊಯ್ದಿದೆ. ಈ ರೀತಿಯ ಮರದ ಬೇರಿನ ಗುಹೆಯು ಇತರೇ ಯಾವ ವೃಕ್ಷದಲ್ಲಿಯೂ ಇಲ್ಲ. ಗಾಳಿಗೂ, ಮಳೆಗೂ ಒಂದಿನಿತೂ ಜಗ್ಗದೆ , ವಸಂತದಲ್ಲಿ ಹಸಿರನ್ನು ಚಿಗುರಿಸುತ್ತಾ ಈ ಮರ ಬೆಳೆಯುತ್ತಿದೆ.

ವಿಜ್ಞಾನ ಮತ್ತು ಜೀವಶಾಸ್ತ್ರದ ನಿಯಮಗಳಿಗೆ ವಿರುದ್ಧವಾಗಿ ಮರ ವೃದ್ಧಿ ಹೊಂದುತ್ತಿದೆ. ಕೆಲವರು ಇದನ್ನು ಮ್ಯಾಜಿಕ್ ಎಂದು ಅಂದುಕೊಂಡರೆ ಇನ್ನೂ ಕೆಲವರು ಇದು ಪ್ರಕೃತಿಯ ಕುಚೇಷ್ಟೆ ಎಂದು ಅಭಿಪ್ರಾಯ ಪಡುತ್ತಾರೆ. ತೀರದಲ್ಲಿ ಬೀಸುವ ಬಿರುಗಾಳಿಯನ್ನೂ ತಡೆದುಕೊಂಡು ಹೇಗೆ ಈ ಮರ ನಿಂತಿದೆ? ಇಷ್ಟು ವರ್ಷಗಳಾದರೂ ಯಾಕೆ ಇದು ಉರುಳಿ ಬಿದ್ದಿಲ್ಲ? ಮಣ್ಣಿನಲ್ಲಿ ಬೇರುಗಳ ಆಧಾರವಿರದೆ ಶೂನ್ಯದಲ್ಲಿ ಹೇಗೆ ನಿಂತುಕೊಂಡಿದೆ? ಎಂಬೆಲ್ಲ ಪ್ರಶ್ನೆಗಳಿಗೆ ಇದುವರೆಗೂ ಯಾರೂ ಕೂಡ ತರ್ಕಬದ್ಧವಾದ ವಿವರಣೆ ನೀಡಿಲ್ಲ. ಒಟ್ಟಾರೆಯಾಗಿ ಕಲಾಲೋಚ್ ತೀರದಲ್ಲಿರುವ ಈ ವಿಶಿಷ್ಟ ಮರ ನೋಡುಗರಿಗೆ ವಿಸ್ಮಯವನ್ನುಂಟು ಮಾಡುತ್ತಿರುವುದಂತೂ ಸತ್ಯ.

■ ವಿದ್ಯಾ ವಿ. ಹಾಲಭಾವಿ